ಮೈಸೂರ ಗೆಜೆಟ್.

ನಂ. XXXVIII.] ಸರ್ಕಾರದಿಂದ ಪ್ರಾಂಯಿಷ್ ಆದ್ದು. [ನಂ. 4.

ಬೆಂಗಳೂರು, ಗುರುವಾರ, ಜನವರಿ ತಾ|| 29, ಸ್ರ 1903.

IVನೇ ಭಾಗ.

ಶ್ರೀಮನ್ ಮೈಸೂರ್ ಮಹಾರಾಜರವರ ಸರ್ಕಾರದವರು ಮಾಡೋಕ್ತಾದ ನಡವಳಿಕೆ.

ನಂ. 970—979.

ಇಂಡಿಯಾ ಗವರ್ನ್‌ಮೆಂಟಿನ ಅಂಡರ್ ಸೆಕ್ರೆಟರಿ ಯವರಾದ ಡಬ್ಲ್ಯೂ. ಎಸ್. ಮ್ಯಾರಿಸ್ ಸಾಹೇಬರವರಿಂದ.

ಒಳದೇಶದ ಗವರ್ನ್‌ಮೆಂಟು ಮುಂತಾದವುಗಳಿಗೆ.

ಸಿಮ್ಲಾ, 28ನೇ ಜುಲೈ 1902.

ಹೋಂ ಡಿಪಾರ್ಟ್‌ಮೆಂಟ್

ಮೆಡಿಕಲ್.

ಅಯ್ಯಾ,

ವರ್ಮಿಷಿಯರ್ ಪ್ಯಾಸ್ಚೋರ್ ಯವರ ವಿಧಾನದ ಮೇರಿಗೆ ಹುಚ್ಚುಹಿಡಿದ ಮೃಗಗಳು ಕಚ್ಚಿದ್ದರಿಂದ ಸಂಕಟಪಡುವ ಜನಗಳಿಗೆ ಚಿಕಿತ್ಸೆ ನಡೆಯಲು ಈ ದೇಶದಲ್ಲಿ ಬಂದು ವೈದ್ಯಶಾಲೆ ಇರುವ ಅಂಶವನ್ನು ನಾನಾ ಸೀವೆಗಳಲ್ಲಿರುವ ಸರ್ವ ನೇಟಿವ್ ಜನರು ಸಾಕಾದಂತೆ ಅರಿತವರಾಗಿ ಇಲ್ಲವೆಂದು ಎಣಿಸಲು ಇಂಡಿಯಾ ಗವರ್ನ್‌ಮೆಂಟಿನವರಿಗೆ ಕಾರಣವಿರುತ್ತದೆ.

ಹಾಗೆ ಅರಿಯದೆ ಇರೋಣದರಿಂದ ತಪ್ಪಿಸಕೊಳ್ಳಬಹುದಾದಂಥ ಸಂಕಟ ಮತ್ತು ಸಾವು ಬಹುಶಃ ಸಂಭವಿಸುತ್ತಿದೆಯೆಂದು ಇಂಡಿಯಾ ಗವರ್ನ್‌ಮೆಂಟಿನವರಿಗೆ ತೋಚುತ್ತದೆ. _____ಗೆ ಅಕ್ಷೇಪಣೆ ಇಲ್ಲವಾದರೆ, ಅಂತಾ ಬಾಧೆಗಳನ್ನು ಅನುಭವಿಸುವ ರೋಗಿಗಳಿಗೆ 1900ನೇ ವರುಷದ ಆಗಸ್ಟು ತಿಂಗಳಲ್ಲಿ ಕಸೌಲಿಯಲ್ಲಿ ಸ್ಥಾಪಿತವಾಗಿರುವ ಪ್ಯಾಸ್ಚೋರ್ ವೈದ್ಯಶಾಲೆಯಲ್ಲಿ ನಡೆಯುವ ಸದರೀ ಪೈತ್ಯ ನಿವಾರಕ ಚಿಕಿತ್ಸೆಯು ಪ್ರಯೋಜನಗಳನ್ನು ತಿಳಿಸುವದಕ್ಕೆ ತಕ್ಕ ಪ್ರತಿ ಅವಕಾಶವನ್ನು ಅವಲಂಬಿಸಬೇಕೆಂದು _____ಲ್ಲಿರುವ ಪರಸ್ಥಳದ ಆಸ್ಪತ್ರೆಗಳ ಚಾರ್ಜ್ಜನ್ನು ಉಳ್ಳ ಎಲ್ಲಾ ಮೆಡಿಕಲ್ ಸರ್ವಿಸ್ಸಿನೇಟುಗಳಿಗೂ (ವೈದ್ಯರಿಗೂ) ಅಗತ್ಯವಾದ ಹುಕುಂಗಳನ್ನು ಕೊಡಬೇಕೆಂದು ಅಪ್ಪಣೆಯಾಗಿರುತ್ತದೆ.

ಇಂಡಿಯಾ ಗವರ್ನ್‌ಮೆಂಟಿನವರ ಅಪ್ಪಣೆ ಮೇರಿಗೆ,

ಡಬ್ಲ್ಯೂ. ಎಸ್. ಮ್ಯಾರಿಸ್,

ಅಂಡರ್ ಸೆಕ್ರೆಟರಿ.

Mysore Government Central Press, Bangalore—1903.